C.R.P.67

Form No.4 (Civil)
Deposition Sheets
(R.P.No.57)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

S.C. No.118/2019 ಸಿ. ಡಬ್ಲ್ಯೂ-6 ಪಿ. ಡಬ್ಲ್ಯೂ-5

ದಿನಾಂಕಃ- 19.10.2024 ರಂದು ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಮುತ್ತುಲಿಂಗಯ್ಯ |
| ತಂದೆಯ ಹೆಸರು | ಲಿಂಗಯ್ಯ |
| ವಯಸ್ಸು | 44 ವರ್ಷ |
| ಉದ್ಯೋಗ | ವ್ಯವಸಾಯ ಮತ್ತು ಕೇಬಲ್ ವರ್ಕ |
| ವಾಸ | ತೊಪ್ಪನಹಳ್ಳಿ ಗ್ರಾಮ |

ಮುಖ್ಯ ವಿಚಾರಣೆಃ- ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-

1. ಚಾಸಾ-1 ರಿಂದ ಚಾಸಾ-5 ರವರ ಪರಿಚಯ ನನಗೆ ಇದೆ. ಚಾಸಾ-1 ರಿಂದ ಚಾಸಾ-5 ರವರು ತೊಪ್ಪನಹಳ್ಳಿ ಗ್ರಾಮದವರು ಆಗಿದ್ದಾರೆ. ಆರೋಪಿಗಳು ಗೊತ್ತು. ಆರೋಪಿಗಳು ಎಲ್ಲರೂ ನಮ್ಮ ಊರಿನವರೇ ಆಗಿದ್ದಾರೆ.

2. ಸುಮಾರು 7 ಅಥವಾ 8 ವರುಷಗಳ ಹಿಂದೆ ಗಲಾಟೆಯಾಗಿದೆ. ಗಲಾಟೆಯು ನಮ್ಮ ಊರಿನಲ್ಲಿ ಇರುವ ಅರಳಿ ಮರದ ಸಮೀಪದಲ್ಲಿ ಆಗಿದೆ. ಆ ದಿನ ಸಂಜೆ 6 ಗಂಟೆ ಅಥವಾ 6.30 ಗಂಟೆಯ ವೇಳೆಗೆ ಗಲಾಟೆಯು ಆಗಿದೆ. ಸದರಿ ಅರಳಿ ಮರವು ಊರಿನಿಂದ ಹೊರಗಡೆ ಇದೆ. ನಾನು ಆ ದಿನ ಊರಿನ ಒಳಗಡೆ ಕೆಲವು ಕೇಬಲ್ ರಿಪೇರಿ ಕೆಲಸಗಳನ್ನು ಮಾಡಿಕೊಂಡು ಬರುತ್ತಾ ಇದ್ದೆನು.

3. ನಾನು ನೋಡಿದಾಗ ಹೇಮಂತ್ ಕುಮಾರ್ ಮತ್ತು ಮುತ್ತುರಾಜು ಅಂದರೆ ಚಾಸಾ-1 ಮತ್ತು ಚಾಸಾ-2 ರವರಿಗೆ ಗಾಯಗಳು ಆಗಿದ್ದವು ಮತ್ತು ಅವರಿಬ್ಬರನ್ನು ಓರ್ವ ಶಿವು ಎನ್ನುವವರು ಸ್ಕೂಟರಿನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಾ ಇದ್ದರು.

4. ಸದರಿ ಚಾಸಾ-1 ಮತ್ತು ಚಾಸಾ-2 ರವರಿಗೆ ಯಾರು ಹಲ್ಲೆ ಮಾಡಿದರು ಎಂಬ ಸಂಗತಿಯನ್ನು ನಾನು ನೋಡಿರುವುದಿಲ್ಲ.

5. ಈ ಘಟನೆಯ ಸಂಬಂಧವಾಗಿ ಆ ಸ್ಥಳಕ್ಕೆ ಮಾರನೇ ದಿನ ಪೊಲೀಸರು ಬಂದಿದ್ದರು. ಆ ಸ್ಥಳದಲ್ಲಿ ಪೊಲೀಸರು ಸ್ಥಳ ಮಹಜರಿಗೆ ನನ್ನ ಸಹಿಯನ್ನು ಪಡೆದುಕೊಂಡರು. ಸದರಿ ಮಹಜರಿಗೆ ನಾನು ಮತ್ತು ಅನಿಲ್ ಎನ್ನುವವರು ಸಹಿ ಮಾಡಿದ್ದೇವೆ.

6. ಈಗ ನನಗೆ ತೋರಿಸಿದ ದಾಖಲೆಯು ಸದರಿ ಮಹಜರ್ ಆಗಿದೆ ಮತ್ತು ಅದರಲ್ಲಿ ನನ್ನ ಸಹಿಯು ಇದೆ. ಸದರಿ ಮಹಜರನ್ನು ನಿಪಿ–2 ಎಂದು ಮತ್ತು ಈ ಸಾಕ್ಷಿಯ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಿದೆ.

> (ಈ ಹಂತದಲ್ಲಿ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರು ಈ ಸಾಕ್ಷಿದಾರರು ಇವರ ಹೇಳಿಕೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ ಮತ್ತು ಆ ಕಾರಣದಿಂದ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕು ಮತ್ತು ಪಾಟೀ ಸವಾಲು ಮಾಡಲು ಅನುಮತಿಯನ್ನು ಕೊಡಬೇಕು ಎಂದು ಪ್ರಾರ್ಥನೆ ಮಾಡಿದ್ದಾರೆ. ಕಡತವನ್ನು ಪರಿಶೀಲನೆ ಮಾಡಿ ನೋಡಲಾಗಿ ಈ ಸಾಕ್ಷಿದಾರರು ಕಲಂ 161ರ ಅಡಿಯಲ್ಲಿ ನೀಡಿರುವ ಹೇಳಿಕೆಯು ಲಭ್ಯ ಇದೆ ಮತ್ತು ಈ ಸಾಕ್ಷಿದಾರರು ತಮ್ಮ ಸದರಿ ಹೇಳಿಕೆಗೆ ವಿರುದ್ದವಾಗಿ ಸಾಕ್ಷ್ಯ ನುಡಿದಿದ್ದಾರೆ, ಆ ಕಾರಣದಿಂದ ಮಾನ್ಯ ಅಭಿಯೋಜಕರ ಪ್ರಾರ್ಥನೆಯನ್ನು ಮಾನ್ಯ ಮಾಡಿದೆ.)

<u>ಪಾಟೀ ಸವಾಲುಃ– ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ–</u>

7. ಆ ಘಟನೆಯು ಪ್ರಾರಂಭ ಆಗುವುದಕ್ಕಿಂತ ಮೊದಲು ಮತ್ತು ಘಟನೆಯು ಆಗುವ ಸಮಯದಲ್ಲಿ ನಾನು ಸಹಾ ಆ ಸ್ಥಳದಲ್ಲಿಯೇ ಇದ್ದೆನು ಮತ್ತು ನನ್ನ ಜೊತೆಯಲ್ಲಿ ಪ್ರಸನ್ನ ಮತ್ತು ರಮೇಶ ಎನ್ನುವವರು ಸಹಾ ಇದ್ದರು ಎಂದರೆ ಸುಳ್ಳು. ನಮ್ಮ ಊರಿನ ಅರಳಿ ಮರದ ಸಮೀಪದಲ್ಲಿ ನಾನು ಇದ್ದ ಸಮಯದಲ್ಲಿಯೇ ಆ ಸ್ಥಳಕ್ಕೆ ಚಾಸಾ–1 ರಿಂದ ಚಾಸಾ–5 ರವರು ಬಂದರು ಎಂದರೆ ಸುಳ್ಳು.

8. ಮೇಲೆ ನನಗೆ ಸೂಚಿಸಿದ ಹಾಗೆ ಘಟನೆಯು ಆಗಿದೆ ಮತ್ತು ಅದೇ ದಿನ ಬೆಳಿಗ್ಗೆ ಆಗಿದ್ದ ಗಲಾಟೆಯ ಸಂಬಂಧವಾಗಿ ಚಾಸಾ–1 ರಿಂದ ಚಾಸಾ–5 ರವರು ಆರೋಪಿಗಳನ್ನು ಪ್ರಶ್ನೆ ಮಾಡಿದರು ಎಂದರೆ ನನಗೆ ಗೊತ್ತಿಲ್ಲ.

9. ಮೇಲೆ ನನಗೆ ಸೂಚಿಸಿದ ಹಾಗೆ ಘಟನೆಯು ಆಗಿದೆ ಮತ್ತು ಆಗ ಮಾತಿಗೆ ಮಾತು ಬೆಳೆದಿದೆ ಮತ್ತು ಗಲಾಟೆಯು ಆಗಿದೆ ಎಂದರೆ ಸುಳ್ಳು.

10. ಮೇಲೆ ನನಗೆ ಸೂಚಿಸಿದ ಹಾಗೆ ಘಟನೆಯು ಆಗಿದೆ ಮತ್ತು ಆಗ 1 ನೇ ಆರೋಪಿಯು ದೊಣ್ಣೆಯಿಂದ ಚಾಸಾ–1 ಮುತ್ತುರಾಜು ರವರ ಮೈಮೇಲೆ ಹೊಡೆದನು ಎಂದರೆ ಸುಳ್ಳು.

11. ಮೇಲೆ ನನಗೆ ಸೂಚಿಸಿದ ಹಾಗೆ ಘಟನೆಯು ಆಗಿದೆ ಮತ್ತು ನಂತರ ಎಲ್ಲಾ ಆರೋಪಿಗಳು ಸೇರಿಕೊಂಡು ದೊಣ್ಣೆ ಮತ್ತು ಮಚ್ಚುಗಳಿಂದ ಚಾಸಾ–1 ರವರ ಮೇಲೆ ಹಲ್ಲೆ ಮಾಡಿದ್ದಾರೆ ಎಂದರೆ ಸುಳ್ಳು.

12. ಮೇಲೆ ನನಗೆ ಸೂಚಿಸಿದ ಹಾಗೆ ಘಟನೆಯು ಆಗಿದೆ ಮತ್ತು ಆ ಸಮಯದಲ್ಲಿ ಚಾಸಾ–2 ರವರು ಗಲಾಟೆಯನ್ನು ಬಿಡಿಸಲು ಬಂದರು ಮತ್ತು ಆಗ 1 ನೇ ಆರೋಪಿ ಚನ್ನೇಗೌಡನು ಮಚ್ಚಿನಿಂದ ಚಾಸಾ–2 ರವರಿಗೆ ಸಹಾ ತಲೆಯ ಮೇಲೆ ಹೊಡೆದಿದ್ದಾನೆ ಎಂದರೆ ನಾನು ಅದನ್ನು ನೋಡಿರುವುದಿಲ್ಲ. ಶಿವಲಿಂಗಯ್ಯ ಎಂಬ ವ್ಯಕ್ತಿಯು ಚೂರಿಯಿಂದ ಚಾಸಾ–2 ರವರ ಎಡಗೈಗೆ ಹೊಡೆದಿದ್ದಾರೆ ಎಂದರೆ ನಾನು ನೋಡಿರುವುದಿಲ್ಲ.

13. ಮೇಲೆ ನನಗೆ ಸೂಚಿಸಿದ ಹಾಗೆ ಘಟನೆಯು ಆಗಿದೆ ಮತ್ತು ಎಲ್ಲಾ ಆರೋಪಿಗಳು ಸೇರಿಕೊಂಡು ಚಾಸಾ–1 ಮತ್ತು 2 ರವರುಗಳಿಗೆ ದೊಣ್ಣೆ ಮತ್ತು ಮಚ್ಚುಗಳಿಂದ ಹಲ್ಲೆ ಮಾಡಿದ್ದಾರೆ ಮತ್ತು ಈ ಸಂಗತಿಯನ್ನು ನಾನು ಕಣ್ಣಾರೆ ನೋಡಿದ್ದೇನೆ ಎಂದರೆ ನಾನು ನೋಡಿರುವುದಿಲ್ಲ.

14. ಮೇಲೆ ನನಗೆ ಸೂಚಿಸಿದ ಹಾಗೆ ಘಟನೆಯು ಆಗಿದೆ ಮತ್ತು ಅದೇ ಪ್ರಕಾರವಾಗಿ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸುಳ್ಳು.

15. ಈಗ ಓದಿ ಹೇಳಿದ ಹೇಳಿಕೆಯನ್ನು ಮತ್ತು ಮುಂದುವರೆದ ಹೇಳಿಕೆಯನ್ನು ನಾನು ಪೊಲೀಸರಿಗೆ ಕೊಟ್ಟಿದ್ದೇನೆ ಎಂದರೆ ಸುಳ್ಳು. ಸದರಿ ಹೇಳಿಕೆಯನ್ನು ನಿಪಿ–3 ಎಂದು ಮತ್ತು ಮುಂದುವರೆದ ಹೇಳಿಕೆಯನ್ನು ನಿಪಿ–4 ಎಂದು ಗುರುತಿಸಿದೆ.

16. ನನಗೂ ಮತ್ತು ಆರೋಪಿಗಳಿಗೂ ಯಾವುದೇ ದ್ವೇಷ ಅಥವಾ ವೈಮನಸ್ಸು ಇರುವುದಿಲ್ಲ. ನಮ್ಮ ಊರಿನಲ್ಲಿ ನಾವೆಲ್ಲರೂ ಸೌಹಾರ್ದಯುತವಾಗಿ ಇದ್ದೇವೆ.

17. ಮೇಲೆ ನನಗೆ ಸೂಚಿಸಿದ ಹಾಗೆ ಘಟನೆಯು ಆಗಿದೆ ಮತ್ತು ಆರೋಪಿಗಳು ನನ್ನ ಜೊತೆ ವಿಶ್ವಾಸದಿಂದ ಇದ್ದಾರೆ ಎಂಬ ಕಾರಣದಿಂದ ನಾನು ಈ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಾ ಇದ್ದೇನೆ ಎಂದರೆ ಸುಳ್ಳು.

ಪಾಟೀ ಸವಾಲುಃ- ಆರೋಪಿತರ ಪರವಾಗಿ ಶ್ರೀ. ಎಸ್ ಹೆಚ್ ವಕೀಲರಿಂದಃ-

ಮಾನ್ಯ ವಕೀಲರು ಹಾಜರಿದ್ದಾರೆ ಮತ್ತು ಯಾವುದೇ ಪಾಟೀಸವಾಲು ಇಲ್ಲ ಎಂದು ನುಡಿದಿದ್ದಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.